# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 09-12-2022 ಶುಕ್ರವಾರದಂದು ಅಪರಾಹ್ನ 3.30 ಗಂಟೆಗೆ ನಡೆದ "ಎಂಟನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಗಳು.

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎಚ್.ರಾಜಶೇಖರ್ | ಕುಲಪತಿ (ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಡಾ.ಎಂ.ಎಸ್.ಗಿರಿಧರ್ ರಾವ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಡಾ. ನಿರ್ಮಲ.ಹೆಚ್.ಎಂ | ಸದಸ್ಯರು |
| 7. | ಡಾ. ಎಸ್.ಹೆಚ್.ಗಂಗೇಗೌಡ | ಸದಸ್ಯರು |
| 8. | ಡಾ. ಜಿ.ಗೋವಿಂದರಾಜು | ಸದಸ್ಯರು |
| 9. | ಡಾ. ಜಯ ಶಂಕರ್. ಎನ್ | ಸದಸ್ಯರು |
| 10. | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ. ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 15. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಶ್ರೀಮತಿ ಶೈಲಜ.ವಿ.ಆರ್., ಕೆಎಎಸ್ | ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ |
| 17. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಅನುಪಸ್ಥಿತರು:**

1. ಡಾ. ಸೈಯದ್ ಕಾರುಖ ಮೊಹಿದ್ದೀನ್
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೊದಲಿಗೆ ಹೊಸದಾಗಿ ಅಧಿಕಾರ ವಹಿಸಿಕೊಂಡಿರುವ ಕುಲಪತಿ (ಪ್ರಭಾರ) ಪ್ರೊ. ಎಚ್.ರಾಜಶೇಖರ್ ಹಾಗೂ ಕುಲಸಚಿವೆ ಶ್ರೀಮತಿ ಶೈಲಜ.ವಿ.ಆರ್., ಕೆಎಎಸ್, ಇವರುಗಳನ್ನು ಪರಿಚಯಿಸುವ ಮೂಲಕ ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಹಾಗೂ

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಇದುವರೆವಿಗೂ ಕಾರ್ಯನಿರ್ವಹಿಸಿರುವ ಪ್ರೊ. ಜಿ.ಹೇಮಂತಕುಮಾರ್ ಹಾಗೂ ಕುಲಸಚಿವರಾಗಿ ಕಾರ್ಯನಿರ್ವಹಿಸಿರುವ ಪ್ರೊ. ಆರ್. ಶಿವಪ್ಪ ಇವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ತದನಂತರ, ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿ, ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ದಿನಾಂಕ: 20-10-2022ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.<br>**ಹಾಗೂ**<br>ದಿನಾಂಕ: 05-11-2022ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |
| ಡಾ. ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ: ಜಿಎಸ್ 13 ಜಿಯುಎಂ 2021, ದಿನಾಂಕ: 28-09-2021 ರಂದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸುತ್ತೋಲೆ ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ "ಕುಲಪತಿಗಳ ಅಧಿಕಾರ ಅವಧಿಯು 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಲಾಗಿದೆ. ಯಾವುದೇ ಸನ್ನಿಹಿತ ಪ್ರಮುಖ ನೀತಿ ನಿರ್ಧಾರಗಳ ಅಗತ್ಯವಿದ್ದಲ್ಲಿ, ಪೂರ್ವಾನುಮತಿಯನ್ನು ಏಕರೂಪವಾಗಿ ಪಡೆಯಬೇಕು" ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 20-10-2022ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ" ಹಾಗೂ ದಿನಾಂಕ: 05-11-2022ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಗಳ ನಡವಳಿಗಳಲ್ಲಿ ತೀರ್ಮಾನಿಸಲಾಗಿರುವ **ಪ್ರಮುಖ ನೀತಿ ನಿರ್ಧಾರಗಳನ್ನು** ಹೊರತುಪಡಿಸಿ, ಉಳಿದ ನಡವಳಿಗಳನ್ನು ಅನುಮೋದನೆ ಮಾಡಬಹುದೆಂದು ತಿಳಿಸಿದರು.<br><br>ಈ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಭೆಯು **ಪ್ರಮುಖ ನೀತಿ ನಿರ್ಧಾರಗಳನ್ನು** (major policy decisions) ಗಳನ್ನು ಹೊರತುಪಡಿಸಿ, ದಿನಾಂಕ: 20-10-2022ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಯನ್ನು **ಹಾಗೂ** ದಿನಾಂಕ: 05-11-2022ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು ಮತ್ತು ಸದರಿ ಎರಡು ಸಭೆಗಳ ನಡವಳಿಯನ್ನು ಆಧರಿಸಿ ತೆಗೆದುಕೊಂಡಿರುವ ಕ್ರಮಗಳ ಪ್ರತಿಯನ್ನು ಗಮನಿಸಲಾಯಿತು. | |
| **ಸಾಮಾನ್ಯ ಸಭೆ 2022/8.1** | ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಬಗೆಗೆ. |
| | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ: 23-09-2022ರ ಪತ್ರದಲ್ಲಿ "ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಸಂಬಂಧ ಸಮಗ್ರ ಪರಿಯೋಜನೆ/ಕಾರ್ಯನೀತಿಯನ್ನು ರೂಪಿಸುವವರೆಗೆ, ಅಧ್ಯಯನ ಪೀಠಗಳ ಸ್ಥಾಪನೆಯ ಕುರಿತಂತೆ ಯಾವುದೇ ಪ್ರಸ್ತಾವನೆಗಳನ್ನು ಶೈಕ್ಷಣಿಕ ಪರಿಷತ್ತು ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ಮುಂದೆ ಮಂಡಿಸದಂತೆ ಹಾಗೂ ಒಂದು ವೇಳೆ ಪರಿಷತ್ತು ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ಸಭೆಗಳಲ್ಲಿ ಪೀಠ ಸ್ಥಾಪನೆ ಸಂಬಂಧ ಪ್ರಸ್ತಾವನೆಗಳು ಅನುಮೋದನೆಗೊಂಡಿದ್ದಲ್ಲಿ, ಅಂಥಹ ಪ್ರಸ್ತಾವನೆಗಳನ್ನು ತಡೆಹಿಡಿಯುವಂತೆ" ನಿರ್ದೇಶಿಸಿರುತ್ತಾರೆ. |
| **ತೀರ್ಮಾನ** | ಗಮನಿಸಲಾಯಿತು |
| **ಸಾಮಾನ್ಯ ಸಭೆ 2022/8.2** | ರೇಷ್ಮೆ ಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಮತ್ತು Nano RAM Technology, Bidadi Industrial Area, Bidadi, Bangalore ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ಅನುಸಮರ್ಥನೆಗಾಗಿ. |
| **ತೀರ್ಮಾನ** | Nano RAM Technology, Bidadi Industrial Area, Bidadi, Bangalore ಸಂಸ್ಥೆಯು ರೇಷ್ಮೆ ಕೃಷಿ ಅಧ್ಯಯನ ವಿಭಾಗದ ಮೂಲಕ Research for Product Development and Training for students in Concerned Field" |

| | |
|---|---|
| | ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ Center Innovative Nanoengineered Technologies (CINT) ಸ್ಥಾಪಿಸಲು ದಿನಾಂಕ: 08-11-2022 ರಂದು ಮಾಡಿಕೊಂಡಿರುವ ಪರಸ್ಪರ ಒಡಂಬಡಿಕೆಯನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/8.3** | ಪ್ರೊ. ಪಿ.ಮಾದೇಶ್, ಪ್ರಾಧ್ಯಾಪಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿನ ನಿರ್ದೇಶಕರ ಹುದ್ದೆಗೆ ನಿಯೋಜನೆ ಮಾಡಿರುವ ಬಗ್ಗೆ. |
| **ತೀರ್ಮಾನ** | ಪ್ರೊ. ಪಿ.ಮಾದೇಶ್, ಪ್ರಾಧ್ಯಾಪಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿಗೆ ನಿಯೋಜನೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಇವರು ಪಡೆಯುತ್ತಿರುವ ಪ್ರಸ್ತುತ ವೇತನ ಮತ್ತು ವೇತನ ಶ್ರೇಣಿಯಲ್ಲಿ ನಿರ್ದೇಶಕರನ್ನಾಗಿ ಕಾರ್ಯನಿರ್ವಹಿಸಲು ಆದೇಶಿಸಿರುವುದನ್ನು ಅನುಸಮರ್ಥನೆಗಾಗಿ ಮಂಡಿಸಿರುವ ಕ್ರಮವನ್ನು ಗಮನಿಸಿದ ಸಭೆಯು ಹಿಂದಿನ ಕುಲಪತಿಗಳಾದ ಪ್ರೊ. ಜಿ.ಹೇಮಂತಕುಮಾರ್ ಅವರು ಸೇವಾವಧಿ ಪೂರ್ಣಗೊಳ್ಳುವ ಅಂತಿಮ ದಿನಗಳಲ್ಲಿ ಕುಲಪತಿಯವರ ಕಛೇರಿಯಿಂದ ಟಿಪ್ಪಣಿಯನ್ನು ಕಳುಹಿಸಿ, ಇದೇ ರೀತಿಯಲ್ಲಿ ನಿಯೋಜನೆ ಮೇರೆಗೆ ಪ್ರಾಧ್ಯಾಪಕರುಗಳನ್ನು ಆಡಳಿತಾತ್ಮಕ ಹುದ್ದೆಗಳಿಗೆ ನೇಮಕ ಮಾಡಿರುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಒಂದು ಸಮಿತಿಯನ್ನು ರಚಿಸಲು ಹಾಗೂ ಸಮಿತಿಯು ಕೂಲಂಕಷವಾಗಿ ಪರಾಮರ್ಶಿಸಿ ನೀಡುವ ವರದಿಯನ್ವಯ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/8.4** | ಹಣಕಾಸು ಸಮಿತಿಗೆ ಒಬ್ಬರು ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆ ಬಗ್ಗೆ. |
| **ತೀರ್ಮಾನ** | ಶ್ರೀ ದೊಡ್ಡಚಾರಿ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದ್ದು, ಇವರ ಸಿಂಡಿಕೇಟ್ ಸದಸ್ಯತ್ವ ದಿನಾಂಕ: 12-12-2022 ರಂದು ಮುಕ್ತಾಯಗೊಳ್ಳುವುದರಿಂದ ಇವರಿಂದ ತೆರವಾದ ಸ್ಥಾನಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 32(1)(V) ರನ್ವಯ ಶ್ರೀ ಎಂ.ಬಿ.ಗಪ್ಪಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರನ್ನು ದಿನಾಂಕ: 13-12-2022 ರಿಂದ ಜಾರಿಗೆ ಬಂದಂತೆ ಮುಂದಿನ ಆದೇಶದವರೆಗೆ ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/8.5** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಮತ್ತು Excelsoft Technology Pvt. Ltd., Mysuru ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು Excelsoft Technology Pvt. Ltd., Mysuru ಸಂಸ್ಥೆಯೊಡನೆ "ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ CONTENT ಗಳನ್ನು ಅಭಿವೃದ್ಧಿಪಡಿಸಲು Excelsoft Technology Pvt. Ltd., Mysuru ಸಂಸ್ಥೆಯ ಸಿಬ್ಬಂದಿಗಳಿಂದ ರೆಕಾರ್ಡಿಂಗ್ ಮಾಡಿಸಿ, ಅವುಗಳನ್ನು ಕೇಂದ್ರದ ವತಿಯಿಂದ ಪ್ರಸಾರ ಮಾಡಲು ಮತ್ತು ಸದರಿ CONTENT ಗಳನ್ನು Excelsoft Technology Pvt. Ltd., Mysuru ರವರಿಗೆ ಒಂದು ಪ್ರತಿಯನ್ನು ನೀಡುವ" ಉದ್ಧೇಶಕ್ಕಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/8.6** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯೊಡನೆ "ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ CONTENT ಗಳನ್ನು ಅಭಿವೃದ್ಧಿಪಡಿಸಲು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸಿಬ್ಬಂದಿಗಳಿಂದ ರೆಕಾರ್ಡಿಂಗ್ ಮಾಡಿಸಿ, ಅವುಗಳನ್ನು ಕೇಂದ್ರದ ವತಿಯಿಂದ ಪ್ರಸಾರ ಮಾಡಲು ಮತ್ತು ಸದರಿ CONTENT ಗಳನ್ನು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆರವರಿಗೆ ಒಂದು ಪ್ರತಿಯನ್ನು ನೀಡುವ" ಉದ್ಧೇಶಕ್ಕಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/8.7** | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ರಚನೆ/ಪುನರ್‌ರಚನೆ ಬಗ್ಗೆ-ಅನುಸಮರ್ಥನೆಗಾಗಿ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ದಿನಾಂಕ: 05-11-2022 ರಂದು ನಡೆದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಒಟ್ಟು 54 ಅಧ್ಯಯನ ಮಂಡಳಿಗಳನ್ನು ರಚಿಸುವ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಇದರಲ್ಲಿ ಕೆಲವೊಂದು ಅಧ್ಯಯನ ಮಂಡಳಿಗಳಲ್ಲಿ ಸೇವಾ ಹಿರಿತನವನ್ನು ಆಧರಿಸಿ ಅಧ್ಯಕ್ಷರನ್ನು ನೇಮಕ ಮಾಡದಿರುವುದು ಕಂಡು ಬಂದಿದೆ. ಅದರಲ್ಲಿ ಮುಖ್ಯವಾಗಿ ಭೌತಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಮನೋವಿಜ್ಞಾನ ವಿಷಯದ ಅಧ್ಯಯನ ಮಂಡಳಿಗಳಿಗೆ ಈಗಾಗಲೇ ಹೊರಡಿಸಲಾಗಿರುವ ಅಧಿಸೂಚನೆಯನ್ನು ಹಿಂಪಡೆದು, ದಿನಾಂಕ: 17-12-2022 ರೊಳಗೆ ಈ ಮೂರು ಅಧ್ಯಯನ ಮಂಡಳಿಗಳನ್ನು ಪುನರ್‌ರಚನೆ ಮಾಡಿ ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, 33 (1) ಮತ್ತು (2) ಅಧಿನಿಯಮದನ್ವಯ Specialized Programme ಅಡಿಯಲ್ಲಿ ಈ ಕೆಳಕಂಡ ಅಧ್ಯಯನ ಮಂಡಳಿಗಳನ್ನು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ರಚನೆ/ಪುನರ್‌ರಚನೆ ಮಾಡಿ ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು.<br>1) Sera Jey Monastic Institute, ಬೈಲುಕುಪ್ಪೆ, ಮೈಸೂರು ಜಿಲ್ಲೆ ಇವರು B.A. (Hons.) Ancient Tibetan Language, B.A. (Hons.) Ancient Philosophy and B.A. (Hons.)Ancient Psychology ಈ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಪಠ್ಯಕ್ರಮಗಳನ್ನು ಸಿದ್ಧಪಡಿಸುವ ಬಗ್ಗೆ.<br>2) Acharya Institute for Innovation and Transformation ಎಂ.ಐ.ಟಿ.ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇವರು B.Des. (Hons.) Vedic Architecture, B.C.A. (Hons.) Artificial Intelligence & Machine Learning and B.C.A. (Hons.) Cyber Security & Data Science ಹೆಚ್ಚುವರಿಯಾಗಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಪಠ್ಯಕ್ರಮಗಳನ್ನು ಸಿದ್ಧಪಡಿಸುವ ಬಗ್ಗೆ.<br>3) Sampoorna International Institute of Agri Science and Horticultural Technology, #271/2, ಕೆ.ಬಿ.ದೊಡ್ಡಿ ಗ್ರಾಮ, ಮಾದಪುರ ದೊಡ್ಡಿ, ನಿಡಘಟ್ಟ ಅಂಚೆ, ಮಂಡ್ಯ ಜಿಲ್ಲೆ ಇವರು M.Sc. (Agri) Argonomy, |

| | |
|---|---|
| | M.Sc. (Agri) Genetics & Plant Breeding and M.Sc. (Agri) Entomology ಹೆಚ್ಚುವರಿಯಾಗಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಪಠ್ಯಕ್ರಮಗಳನ್ನು ಸಿದ್ಧಪಡಿಸುವ ಬಗ್ಗೆ.<br>4) Malabar Institute of Optometry, ಗುಂಡ್ಲುಪೇಟೆ ಸಂಸ್ಥೆಯ B.Sc. Optometry ಕೋರ್ಸ್‌ಗೆ ಈಗಾಗಲೇ ಅಧ್ಯಯನ ಮಂಡಳಿಯನ್ನು ರಚಿಸಲಾಗಿತ್ತು. ಪ್ರಸ್ತುತ, ಈ ಅಧ್ಯಯನ ಮಂಡಳಿಯ ಅವಧಿಯು ನವೆಂಬರ್ 2022ಕ್ಕೆ ಅಂತ್ಯಗೊಳ್ಳುವ ಹಿನ್ನೆಲೆಯಲ್ಲಿ B.Sc. Optometry ಕೋರ್ಸ್‌ನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ ಕೊಡುವ ಬಗ್ಗೆ. |
| ಸಾಮಾನ್ಯ ಸಭೆ 2022/8.8 | ಸಮಿ ಲ್ಯಾಬ್ಸ್ ಲಿಮಿಟೆಡ್ (Sami Labs Limited), ಬೆಂಗಳೂರು ಸಂಶೋಧನಾ ಕೇಂದ್ರವನ್ನು ಮುಕ್ತಾಯಗೊಳಿಸಲು ಅನುಮತಿ ಕೋರಿರುವ ಬಗ್ಗೆ. |
| ತೀರ್ಮಾನ | ಸಮಿ ಲ್ಯಾಬ್ಸ್ ಲಿಮಿಟೆಡ್ (Sami Labs Limited), ಬೆಂಗಳೂರು ಸಂಸ್ಥೆಗೆ ನೀಡಲಾಗಿದ್ದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು 2022-23ನೇ ಸಾಲಿನಿಂದ ಜಾರಿಗೆ ಬಂದಂತೆ ಮುಕ್ತಾಯಗೊಳಿಸಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/8.9 | ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಎಂ.ಎಸ್.ಚಂದ್ರಶೇಖರ್, ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 08-02-2021ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 07-02-2023ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ.ಕೃಷ್ಣವೇಣಿ.ಎಸ್, ಪ್ರಾಧ್ಯಾಪಕರು ಅವರು ಹಿರಿಯರಾಗಿರುತ್ತಾರೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ.ಕೃಷ್ಣವೇಣಿ.ಎಸ್, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 08-02-2023ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಭೌತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.10 | ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಎಂ.ಕೋಮಲ, ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-03-2021 ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 28-02-2023ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಅಸ್ನಾ ಉರೂಜ್, ಪ್ರಾಧ್ಯಾಪಕರು ಅವರು ಹಿರಿಯರಾಗಿರುತ್ತಾರೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಅಸ್ನಾ ಉರೂಜ್, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01-03-2023 ರಿಂದ ಜಾರಿಗೆ |

| | |
|---|---|
| | ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.11 | ಸಮಾಜಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಯಶೋಧ.ಎಸ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 28-02-2021ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 27-02-2023ಕ್ಕೆ ಮುಕ್ತಾಯಗೊಳ್ಳುತ್ತಿದೆ. ಪ್ರೊ. ಯಶೋಧ.ಎಸ್, ಪ್ರಾಧ್ಯಾಪಕರು ಇವರೊಬ್ಬರನ್ನು ಬಿಟ್ಟು ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬೇರೆ ಯಾರು ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಯಶೋಧ.ಎಸ್, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 28-02-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.12 | ತತ್ವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಡ್ಯಾನಿಯಲ್, ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 31-03-2021ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 28-02-2023ಕ್ಕೆ ಮುಕ್ತಾಯಗೊಳ್ಳುತ್ತಿದೆ. ಡಾ. ಡ್ಯಾನಿಯಲ್ ಇವರೊಬ್ಬರನ್ನು ಬಿಟ್ಟು ತತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬೇರೆ ಯಾರು ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಡಾ. ಡ್ಯಾನಿಯಲ್, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-03-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ತತ್ವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.13 | ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಎಂ.ಆರ್.ಗಂಗಾಧರ್, ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 31-03-2021 ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 28-02-2023ಕ್ಕೆ ಮುಕ್ತಾಯಗೊಳ್ಳುತ್ತಿದೆ. ಪ್ರೊ. ಎಂ.ಆರ್.ಗಂಗಾಧರ್, ಪ್ರಾಧ್ಯಾಪಕರು ಇವರೊಬ್ಬರನ್ನು ಬಿಟ್ಟು ಮಾನವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬೇರೆ ಯಾರು ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲ. |

| | |
|---|---|
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಎಂ.ಆರ್.ಗಂಗಾಧರ್, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-03-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಮಾನವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.14 | ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಪ್ರೊ. ಎಂ.ಎಸ್.ಸಪ್ನ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ರಾಕೇಶ್ ಗೌಡ ಅವರನ್ನು ಪ್ರೊ. ಎಂ.ಎಸ್ ಸಪ್ನ ಅವರು ಕೈಗೊಂಡಿರುವ ಪ್ರಾಜೆಕ್ಟ್‌ಗೆ ಪ್ರಾಜೆಕ್ಟ್ ಕೋ-ಆರ್ಡಿನೇಟರ್ ಆಗಿ ನೇಮಕ ಮಾಡಿಕೊಂಡಿರುತ್ತಾರೆ. ಪ್ರೊ. ಎಂ.ಎಸ್ ಸಪ್ನ ಅವರು ಕೈಗೊಂಡಿರುವ ಪ್ರಾಜೆಕ್ಟ್‌ಗೆ ಹಾಗೂ ಪ್ರಾಜೆಕ್ಟ್ ಕೋ-ಆರ್ಡಿನೇಟರ್ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ವಿಶ್ವವಿದ್ಯಾನಿಲಯದ ವತಿಯಿಂದ ಪೂರ್ವಾನುಮತಿ ಪಡೆದಿರುವುದರ ಸಂಬಂಧ ಸ್ಪಷ್ಟೀಕರಣ ಒದಗಿಸಬೇಕೆಂದು ಕೋರಿದರು. |
| | ಪ್ರೊ. ನಿರಂಜನ್ ಇವರನ್ನು ದಿನಾಂಕ: 01-02-2021 ರಿಂದ ಜಾರಿಗೆ ಬಂದಂತೆ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಸದರಿಯವರು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ, ಕೋಲಾರ ಇಲ್ಲಿಗೆ ಕುಲಪತಿಗಳಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ, ಪ್ರೊ. ಸಿ.ಕೆ.ಪುಟ್ಟಸ್ವಾಮಿ ಅವರನ್ನು ದಿನಾಂಕ: 01-02-2022ರಿಂದ ಜಾರಿಗೆ ಬಂದಂತೆ ಪ್ರಭಾರ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಪ್ರಸ್ತುತ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಎಂ.ಎಸ್.ಸಪ್ನ, ಪ್ರಾಧ್ಯಾಪಕರು ಅವರು ಹಿರಿಯರಾಗಿರುತ್ತಾರೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಎಂ.ಎಸ್.ಸಪ್ನ, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ** 2022/8.15 | ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಎಸ್.ಸತೀಶ, ಪ್ರಾಧ್ಯಾಪಕರು, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 08-02-2021 ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ: 07-02-2023ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಡಾ. ಎಂ.ವೈ.ಶ್ರೀನಿವಾಸ, ಪ್ರಾಧ್ಯಾಪಕರು ಅವರು ಹಿರಿಯರಾಗಿರುತ್ತಾರೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಡಾ. ಎಂ.ವೈ.ಶ್ರೀನಿವಾಸ, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 08-02-2023 ರಿಂದ ಜಾರಿಗೆ ಬಂದಂತೆ |

| | |
|---|---|
| | ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.16 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭದ್ರತಾ ಸೇವೆಯನ್ನು ಒದಗಿಸುತ್ತಿರುವ ಮೆ.: ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರ ಭದ್ರತಾ ಸಿಬ್ಬಂದಿಗಳಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ನೀಡುವ ಬಗ್ಗೆ. |
| | ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭದ್ರತಾ ಸೇವೆಯನ್ನು ಒದಗಿಸುತ್ತಿರುವ ಮೆ.: ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರು ಕರ್ನಾಟಕ ಸರ್ಕಾರದ ಕಾರ್ಮಿಕ ನಿರ್ದೇಶನಾಲಯವು ಕಾಲಕಾಲಕ್ಕೆ ನಿಗದಿಪಡಿಸುವ ಕನಿಷ್ಠ ವೇತನ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಿರುವುದಿಲ್ಲ. ಹಾಗೆಯೇ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಭದ್ರತಾ ಸಿಬ್ಬಂದಿಗಳಿಗೆ weekly half ವೇತನವನ್ನು ಪಾವತಿಸಬೇಕೆಂದು ತಿಳಿಸಿದ ಒಂದೆರೆಡು ತಿಂಗಳು ಮಾತ್ರ ಪಾವತಿಸಿದ್ದು, ಪ್ರಸ್ತುತ ಪಾವತಿಸುತ್ತಿಲ್ಲವೆಂದು ಆಕ್ಷೇಪಿಸಿದರು ಹಾಗೂ ಈ ಸಂಬಂಧ ಮೆ.: ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ನೋಟಿಸ್ ಜಾರಿಗೊಳಿಸಬೇಕೆಂದು ತಿಳಿಸಿದರು. |
| ತೀರ್ಮಾನ | ಕರ್ನಾಟಕ ಸರ್ಕಾರದ ಕಾರ್ಮಿಕ ನಿರ್ದೇಶನಾಲಯವು ಕಾಲಕಾಲಕ್ಕೆ ನಿಗದಿಪಡಿಸುವ ಕನಿಷ್ಠ ವೇತನ ಹಾಗೂ ಇತರೆ ಭತ್ಯೆಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡು, ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭದ್ರತಾ ಸೇವೆಯನ್ನು ಒದಗಿಸುತ್ತಿರುವ ಮೆ.: ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರ ಭದ್ರತಾ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಪಾವತಿಸುವಂತೆ ಜರೂರಾಗಿ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು. |
| ಸಾಮಾನ್ಯ ಸಭೆ 2022/8.17 | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಚಾಮರಾಜನಗರ, ಹಾಸನ ಮತ್ತು ಮಂಡ್ಯ ಕೇಂದ್ರಗಳಿಗೆ ಜಮೀನು, ಕಟ್ಟಡ, ಪೀಠೋಪಕರಣ ಹಾಗೂ ಇತರೆ ಸಾಮಾಗ್ರಿಗಳನ್ನು ವರ್ಗಾಯಿಸುವ ಕುರಿತು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಚಾಮರಾಜನಗರ, ಹಾಸನ ಮತ್ತು ಮಂಡ್ಯ ಕೇಂದ್ರಗಳಿಗೆ ಜಮೀನು, ಕಟ್ಟಡ, ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು ಪ್ರಸ್ತುತ ಹೇಗಿದೆಯೋ ಹಾಗೇ ಎಲ್ಲಾ ದಾಖಲೆಗಳೊಂದಿಗೆ ಸಂಬಂಧಪಟ್ಟ ಆಯಾ ಮಾತೃ ವಿಶ್ವವಿದ್ಯಾನಿಲಯಗಳ ಕುಲಸಚಿವರು (ಆಡಳಿತ) ಇವರು ನಿಯಮಾನುಸಾರ ವರ್ಗಾಯಿಸಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.18 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ವೇದ ವಿಜ್ಞಾನ ಕೇಂದ್ರ" ಸ್ಥಾಪಿಸುವ ಬಗೆಗೆ. |
| | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ: 23-09-2022ರ ಪತ್ರದಲ್ಲಿ "ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಸಂಬಂಧ ಸಮಗ್ರ ಪರಿಯೋಜನೆ/ಕಾರ್ಯನೀತಿಯನ್ನು ರೂಪಿಸುವವರೆಗೆ, ಅಧ್ಯಯನ ಪೀಠಗಳ ಸ್ಥಾಪನೆಯ ಕುರಿತಂತೆ ಯಾವುದೇ ಪ್ರಸ್ತಾವನೆಗಳನ್ನು ಶೈಕ್ಷಣಿಕ ಪರಿಷತ್ತು ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ಮುಂದೆ ಮಂಡಿಸದಂತೆ ಹಾಗೂ ಒಂದು ವೇಳೆ ಪರಿಷತ್ತು ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ಸಭೆಗಳಲ್ಲಿ ಪೀಠ ಸ್ಥಾಪನೆ ಸಂಬಂಧ ಪ್ರಸ್ತಾವನೆಗಳು ಅನುಮೋದನೆಗೊಂಡಿದ್ದಲ್ಲಿ, ಅಂಥಹ ಪ್ರಸ್ತಾವನೆಗಳನ್ನು ತಡೆಹಿಡಿಯುವಂತೆ" ನಿರ್ದೇಶಿಸಿರುತ್ತಾರೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ವೇದ ವಿಜ್ಞಾನ ಕೇಂದ್ರ" ಸ್ಥಾಪಿಸಲು ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2022/8.19 | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಕೆಳಕಂಡ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕೋರಿರುವ ಬಗ್ಗೆ. |
| | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್ ಇವರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ 04 ಮಾಹಿತಿಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಬೇಕೆಂದು ಕೋರಿರುತ್ತಾರೆ. |
| ತೀರ್ಮಾನ | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಸದರಿ ಸಿಂಡಿಕೇಟ್ ಸಭೆಯಲ್ಲಿ ನಾಲ್ಕು ವಿಷಯ/ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ನೀಡಬೇಕೆಂದು ಕೋರಿರುವುದನ್ನು ಗಮನಿಸಿದ ಸಭೆಯು ಪೂರ್ಣ ಪ್ರಮಾಣದಲ್ಲಿ ಮಾಹಿತಿ ಒದಗಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. |
| ಸಾಮಾನ್ಯ ಸಭೆ 2022/8.20 | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಭಾರ ಪ್ರಾಂಶುಪಾಲರುಗಳನ್ನು ವರ್ಗಾವಣೆ ಮಾಡಿರುವ ಬಗ್ಗೆ. |
| ತೀರ್ಮಾನ | ದಿನಾಂಕ: 08-11-2022 ರಂದು ನಡೆದ ದ್ವಿಸದಸ್ಯ ಸಮಿತಿ ಸಭೆಯ ಶಿಫಾರಸ್ಸಿನನ್ವಯ, ಮಹಾರಾಜ/ಯುವರಾಜ/ವಿಶ್ವವಿದ್ಯಾನಿಲಯ ಸಂಜೆ/ಲಲಿತ ಕಲೆಗಳ ಕಾಲೇಜುಗಳಲ್ಲಿ ಪ್ರಭಾರ ಪ್ರಾಂಶುಪಾಲರುಗಳನ್ನು ವರ್ಗಾವಣೆ ಮಾಡಿರುವುದನ್ನು ಸಭೆಯು ಪರಿಶೀಲಿಸಿದ್ದು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ಎನ್.ಯಶೋದ ಅವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿ ಪತ್ರದ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸಭೆಯು ಈ ಕೆಳಕಂಡ ಅಂಶಗಳನ್ನು ಪರಾಮರ್ಶಿಸಲು ಸಭೆಯು ನಿರ್ಣಯಿಸಿತು.<br>* ದಿನಾಂಕ: 08-11-2022 ರಂದು ನಡೆದ ದ್ವಿಸದಸ್ಯ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಮರು ಪರಿಶೀಲಿಸುವುದು.<br>* ಪ್ರಸ್ತುತ ಸಿದ್ಧಪಡಿಸಿರುವ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ, ನಿಯಮಾನುಸಾರ ಮೇಲ್ಕಂಡ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಪ್ರಭಾರ ಪ್ರಾಂಶುಪಾಲರುಗಳ ನಿಯೋಜನೆಯನ್ನು ಗುರುತಿಸುವುದು. |
| ಸಾಮಾನ್ಯ ಸಭೆ 2022/8.21 | ಲಲಿತ ಕಲಾ ಕಾಲೇಜಿನಲ್ಲಿರುವ ಎರಡು ವರ್ಷದ ಸಂಗೀತ, ನೃತ್ಯ ಡಿಪ್ಲೊಮಾ ಕೋರ್ಸುಗಳ ಪ್ರವೇಶಾತಿ ಬಗ್ಗೆ. |
| ತೀರ್ಮಾನ | ಲಲಿತ ಕಲಾ ಕಾಲೇಜಿನಲ್ಲಿರುವ ಎರಡು ವರ್ಷದ ಸಂಗೀತ, ನೃತ್ಯ ಡಿಪ್ಲೊಮಾ ಹಾಗೂ ಪ್ರದರ್ಶಕ ಕಲೆಗಳ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ ಲಲಿತ ಕಲೆಗಳ ಕಾಲೇಜಿನ ಪ್ರಾಂಶುಪಾಲರೊಂದಿಗೆ ಚರ್ಚಿಸಿ, ಸೂಕ್ತ ಸಲಹೆ ಹಾಗೂ ಸೂಚನೆಗಳನ್ನು ಪಡೆಯುವುದರೊಂದಿಗೆ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಪವಿತ್ರ.ವೈ.ಕೆ ಇವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ, ಅನುಷ್ಠಾನಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. |
| ಸಾಮಾನ್ಯ ಸಭೆ 2022/8.22 | 2022-23ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನಲ್ಲಿ ಐ.ಡಿ.ಎಫ್., ಸಹೋದ್ಯಮ ಕೋರ್ಸ್ ಐಐಡಿಎಫ್ ಹಾಗೂ ಜಿ.ಆರ್.ಎ. (135/136) ಖಾತೆಗಳಿಂದ ಹುಂಡಿಗಳನ್ನು ಪಾವತಿಸಿರುವ ಹಾಗೂ ಪಾವತಿಸಬೇಕಾಗಿರುವ ಬಗ್ಗೆ. |
| | <u>**ಹಣಕಾಸು ಅಧಿಕಾರಿ**</u> – ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆಯುವ ಹಾಗೂ ಪಡೆದಿರುವ ಹುಂಡಿಗಳನ್ನು ಇನ್ನು ಮುಂದೆ ಮೊದಲು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು, ತದನಂತರ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆಯಬೇಕೆಂದು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಐ.ಡಿ.ಎಫ್., ಸಹೋದ್ಯಮ ಕೋರ್ಸ್ ಐಐಡಿಎಫ್ ಹಾಗೂ ಜಿ.ಆರ್.ಎ. (135/136) ಖಾತೆಗಳಿಂದ ಹುಂಡಿಗಳನ್ನು ಪಾವತಿಸಿರುವ ಹಾಗೂ ಪಾವತಿಸಬೇಕಾಗಿರುವ ವಿವರವನ್ನು ಸಭೆಯಲ್ಲಿ ಮಂಡಿಸಿದರು ಹಾಗೂ 1-4 ಲಕ್ಷದೊಳಗಿನ ಕಡಿಮೆ ಮೊತ್ತದ ಹುಂಡಿಗಳನ್ನು ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದು.<br><br><u>**ಅಧ್ಯಕ್ಷರು**</u> – ಸಂಶೋಧನಾ ವಿದ್ಯಾರ್ಥಿವೇತನ ಹಾಗೂ ಅತಿಥಿ ಉಪನ್ಯಾಸಕರುಗಳ ವೇತನವನ್ನು ನಿಗದಿತ ಅವಧಿಯಲ್ಲಿ ಪಾವತಿಸಬೇಕೆಂದು ಹಣಕಾಸು ಅಧಿಕಾರಿಯವರಿಗೆ |

ಸೂಚಿಸಿದ್ದು, ಉಳಿದ ಬಿಲ್ಲುಗಳನ್ನು ಅನುದಾನದ ಲಭ್ಯತೆಗನುಸರಿಸಿ ಒಂದೊಂದಾಗಿ ಪಾವತಿ ಮಾಡಬೇಕೆಂದು ತಿಳಿಸಿದರು.

**ಪ್ರೊ. ಜಿ.ವೆಂಕಟೇಶ್‌ಕುಮಾರ್** – ಕಾಮಗಾರಿ/ಇತರೆ ಹುಂಡಿಗಳನ್ನು ಪಾವತಿಸುವ ಸಂಬಂಧ ಐಡಿಎಫ್ ಖಾತೆಯಿಂದ ಒಟ್ಟು ಮೊತ್ತ ರೂ.5,00,39,033/-ಗಳನ್ನು ಹಾಗೂ ಸಹೋದ್ಯಮ ಕೋರ್ಸಿನ ಖಾತೆಯಿಂದ ಒಟ್ಟು ಮೊತ್ತ ರೂ.8,14,96,297/-ಗಳ ಹುಂಡಿಗಳ ಪಾವತಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡಿರುವುದು ಸೂಕ್ತವಲ್ಲ. ಏಕೆಂದರೆ ಈ ಎರಡು ಮೊತ್ತಗಳು ಹೆಚ್ಚಿನ ಮೊತ್ತವಾಗಿರುವುದರಿಂದ, ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು, ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯದೇ ಪಾವತಿಗೆ ಕ್ರಮ ವಹಿಸಿರುವುದು ನಿಯಮವಲ್ಲವೆಂದು ಪ್ರಸ್ತಾಪಿಸಿದರು.

**ಶ್ರೀ ಎಸ್.ಡಿ.ದೊಡ್ಡಚಾರಿ** – ಕಡಿಮೆ ಮೊತ್ತದ 1 ರಿಂದ 4 ಲಕ್ಷದೊಳಗಿನ ಹುಂಡಿಗಳನ್ನು ಪಾವತಿಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

**ತೀರ್ಮಾನ**

| Sl No. | Name of the Account | Account No | Amount (Rs.) |
|---|---|---|---|
| 1 | Infrastructure Development Fund | 54007591324 | 5,23,74,302/- |
| 2 | Collaboration Course | 54007592690 | 7,23,47,677/- |
| 3 | GRA (Minor work Bills 135/136) | 54007591471 | 1,62,52,560/- |
| 4 | Information Infrastructure Development Fund | 54007592714 | 13,46,328/- |

2022-23ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನಲ್ಲಿ ಐ.ಡಿ.ಎಫ್., ಸಹೋದ್ಯಮ ಕೋರ್ಸ್ ಐಐಡಿಎಫ್ ಹಾಗೂ ಜಿ.ಆರ್.ಎ. (135/136) ಖಾತೆಗಳಿಂದ ಪಾವತಿಸಿರುವುದನ್ನು ಸಭೆಯು ಒಪ್ಪಿ ಅನುಸಮರ್ಥಿಸಿತು. ಹಾಗೂ ಇನ್ನು ಮುಂದೆ ಮೊದಲು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು, ತದನಂತರ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆಯುವುದು ಹಾಗೂ ಪಾವತಿಸಬೇಕಾಗಿರುವ ಇತರೆ ಕಾಮಗಾರಿ ಹುಂಡಿಗಳ ಮೊತ್ತವನ್ನು ಐ.ಡಿ.ಎಫ್., ಖಾತೆಯಿಂದ ರೂ.5,00,39,033/-, ಸಹೋದ್ಯಮ ಕೋರ್ಸ್‌ನಿಂದ ರೂ. 8,14,96,297/- ಹಾಗೂ ಜಿ.ಆರ್.ಎ. ಖಾತೆ ಶೀರ್ಷಿಕೆ 135/136 ರಿಂದ ರೂ.1,41,96,503/-ಗಳಿಗೆ ವಿವಿಧ ಕೇಂದ್ರಗಳಿಂದ ಪಾವತಿಗಾಗಿ ಸಲ್ಲಿಸಿರುವ ಹುಂಡಿಗಳನ್ನು, ಪಾವತಿಸಲು ಸಭೆಯು ತೀರ್ಮಾನಿಸಿತು.

**ಸಾಮಾನ್ಯ ಸಭೆ 2022/8.23**

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳನ್ನು 2022-23ನೇ ಶೈಕ್ಷಣಿಕ ಸಾಲಿಗೆ ಆಹ್ವಾನಿಸುವ ಬಗ್ಗೆ.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳನ್ನು 2022-23ನೇ ಶೈಕ್ಷಣಿಕ ಸಾಲಿಗೆ ಆಹ್ವಾನಿಸುವ ಬಗ್ಗೆ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರುಗಳು ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

**ಅಧ್ಯಕ್ಷರು** – ವಿಶ್ವವಿದ್ಯಾನಿಲಯವು ತಿಳಿಸಿರುವ ಅರ್ಹತೆಗಳನ್ನು ಪೂರೈಸಿದ ಅಭ್ಯರ್ಥಿಗಳಿಗೆ ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡಲು ಪ್ರಥಮ ಆದ್ಯತೆ ನೀಡಲಾಗುವುದು. ಇಲ್ಲವಾದ್ದಲ್ಲಿ, ಅಭ್ಯರ್ಥಿಗಳಿಂದ ನಿಗದಿತ ಅವಧಿಯೊಳಗೆ ಅರ್ಹತೆಗಳನ್ನು ಪೂರ್ಣಗೊಳಿಸಬೇಕೆಂದು ಮುಚ್ಚಳಿಕೆ ಪಡೆದುಕೊಂಡು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಅವಕಾಶ ಮಾಡಿಕೊಡುವುದು. ಒಂದು ವೇಳೆ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಅರ್ಹತೆಗಳನ್ನು ಪೂರೈಸದ ಅಭ್ಯರ್ಥಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ. 12 ಗಂಟೆಗಳ ಬೋಧನಾ ಕಾರ್ಯಭಾರವನ್ನು ಒಬ್ಬರು ಅತಿಥಿ ಉಪನ್ಯಾಸಕರಿಗೆ ಹಂಚಿಕೆ ಮಾಡುವ ಅವಕಾಶ ಇರುತ್ತದೆ. ಪ್ರತಿ ಶೈಕ್ಷಣಿಕ ಸಾಲಿನಲ್ಲೂ

| | |
|---|---|
| | ಬೋಧನಾ ಕಾರ್ಯಭಾರವನ್ನು ಎಲ್ಲಾ ವಿಭಾಗದವರು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು. ಒಂದು ವೇಳೆ ಬೋಧನಾ ಕಾರ್ಯಭಾರವಿದ್ದರೂ ಕಳುಹಿಸದೇ ಇರುವುದು ಅಥವಾ ಇಲ್ಲದಿದ್ದರೂ ಸೃಜಿಸಿಕೊಂಡು ಕಳುಹಿಸುವ ವಿಭಾಗದವರಿಗೆ ಆಯಾ ವಿಭಾಗದ ಅಧ್ಯಕ್ಷರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು. ಮುಂದಿನ ಶೈಕ್ಷಣಿಕ ಸಾಲಿನಿಂದ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಿ, ನೇರ ಸಂದರ್ಶನ ಮುಖಾಂತರ ಹಾಗೂ ರೋಸ್ಟರ್ ನಿಯಮವನ್ನು ಪಾಲಿಸಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಲಾಗುವುದು.<br><br>**ಡಾ. ಚೈತ್ರ ನಾರಾಯಣ** – ಮಹಾರಾಜ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿರುವ ಶ್ರೀಮತಿ ನಿವೇದಿತಾ ಅವರು ಚಿನ್ನದ ಪದಕವನ್ನು ಪಡೆದಿರುತ್ತಾರೆ ಹಾಗೂ ಕೆಸೆಟ್ ತೇರ್ಗಡೆ ಹೊಂದಿರುವ ಅರ್ಹತೆಯಿದ್ದರೂ ಕೇವಲ 04 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ವಿಭಾಗದಲ್ಲಿ ಹೆಚ್ಚುವರಿಯಾಗಿ 04 ಗಂಟೆಗಳ ಬೋಧನಾ ಕಾರ್ಯಭಾರವನ್ನು ಸೃಜಿಸಿದ್ದರೂ ಸಹ ಸದರಿ ಅತಿಥಿ ಉಪನ್ಯಾಸಕರಿಗೆ ಹಂಚಿಕೆ ಮಾಡಿರುವುದಿಲ್ಲ. ಆದುದರಿಂದ, ಪ್ರಸ್ತುತವಿರುವ ಬೋಧನಾ ಕಾರ್ಯಭಾರದೊಂದಿಗೆ ಹೆಚ್ಚುವರಿ 04 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಬೇಕೆಂದು ತಿಳಿಸಿದರು.<br><br>**ಪ್ರೊ. ಜಿ.ವೆಂಕಟೇಶ್‌ಕುಮಾರ್** – ಅತಿಥಿ ಉಪನ್ಯಾಸಕರುಗಳು ಈಗಾಗಲೇ ಪಾಠ-ಪ್ರವಚನಗಳನ್ನು ಪ್ರಾರಂಭಿಸಲಾಗಿದ್ದು, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ದಿನಾಂಕ: 01-10-2022 ರಿಂದ ಆದೇಶ ಹೊರಡಿಸಲು ತೀರ್ಮಾನಿಸಲಾಯಿತು. ಆದರೆ, ನವೆಂಬರ್ 2022 ಮಾಹೆಯು ಮುಗಿದಿದ್ದರೂ ಸಹ ಇದುವರೆವಿಗೂ ನೇಮಕಾತಿ ಆದೇಶ ನೀಡಿರುವುದಿಲ್ಲ. ಹಿಂದೆ ಅತಿಥಿ ಉಪನ್ಯಾಸಕರುಗಳಿಗೆ ದಿನಗೂಲಿ ಆಧಾರದ ಮೇಲೆ ವೇತನವನ್ನು ಪಾವತಿಸಲಾಗುತ್ತಿತ್ತು. ಇದರ ಬದಲು ಹನ್ನೊಂದು ತಿಂಗಳಿಗೆ ಗಂಟೆಗಳ ಆಧಾರದ ಮೇಲೆ ವೇತನ ಪಾವತಿಸಲು ಕ್ರಮ ಕೈಗೊಂಡು ದಿನಾಂಕ: 01-12-2022 ರಿಂದ ನೇಮಕಾತಿ ಆದೇಶ ನೀಡಬೇಕೆಂದು ತಿಳಿಸಿದರು.<br><br>**ಶ್ರೀ ಎಸ್.ಡಿ.ದೊಡ್ಡಚಾರಿ** – ಪರಿಸರ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಬೋಧನಾ ಕಾರ್ಯಭಾರವಿಲ್ಲದಿದ್ದರೂ ಸಹ ಕಾರ್ಯಭಾರವನ್ನು ಸೃಜಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.<br><br>**ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್** – ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಇನ್ನು ಮುಂದೆ ಅತಿಥಿ ಉಪನ್ಯಾಸಕರುಗಳಿಗೆ 04 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿ, ನೇಮಕಾತಿ ಮಾಡುವ ಬದಲು 08 ಹಾಗೂ 12 ಗಂಟೆಗಳ ಬೋಧನಾ ಕಾರ್ಯಭಾರದೊಂದಿಗೆ ನೇಮಕ ಮಾಡಲು ತೀರ್ಮಾನ ತೆಗೆದುಕೊಂಡಿದ್ದು, ಈ ತೀರ್ಮಾನವನ್ನು ಇದುವರೆವಿಗೂ ಅನುಷ್ಠಾನಗೊಳಿಸಿರುವುದಿಲ್ಲ ಮತ್ತು ಸ್ನಾತಕೋತ್ತರ ವಿಷಯಗಳಲ್ಲಿ ನೇಮಕಾತಿ ನಿಯಮಗಳನ್ವಯ ಪಿಎಚ್.ಡಿ, ಕೆಸೆಟ್, ನೆಟ್ ತೇರ್ಗಡೆಗೊಂಡಿರುವ ಅರ್ಹತೆಯಿಲ್ಲದಿದ್ದರೂ, ಕೇವಲ ಸ್ನಾತಕೋತ್ತರ ಪದವಿ ತೇರ್ಗಡೆ ಹೊಂದಿದವರಿಗೆ ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡಿರುವುದು ಕಂಡು ಬಂದಿದೆ ಈ ಸಂಬಂಧ ವಿಶ್ವವಿದ್ಯಾನಿಲಯವು ಕೂಲಂಕಷವಾಗಿ ಪರಿಶೀಲಿಸಿ ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ನೇಮಕ ಮಾಡುವುದು ಸೂಕ್ತವೆಂದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಲ್ಲಿ ಯು.ಜಿ.ಸಿ ನಿಯಮಾನುಸಾರ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಅರ್ಹತೆಗಳನ್ನು ಪೂರೈಸಿದ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರುಗಳಾಗಿ 2022-23ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಲು ತೀರ್ಮಾನಿಸಿತು ಹಾಗೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಅರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರುಗಳಿಗೆ ಒಂದು ವರ್ಷದ ಕಾಲಮಿತಿಯೊಳಗೆ ಅರ್ಹತೆಯನ್ನು ಹೊಂದಬೇಕೆನ್ನುವ ಷರತ್ತಿನೊಂದಿಗೆ 2022-23ನೇ ಶೈಕ್ಷಣಿಕ ಸಾಲಿಗೆ ಮುಂದುವರಿಸುವುದು ಹಾಗೂ ಇನ್ನುಳಿದ ಹೆಚ್ಚುವರಿ ಕಾರ್ಯಭಾರಕ್ಕೆ ಆಯಾ ಅಧ್ಯಯನ ವಿಭಾಗಗಳ ವಿಭಾಗೀಯ ಮಂಡಳಿಯ ಶಿಫಾರಸ್ಸಿನೊಂದಿಗೆ Walk in-Interview ಮುಖಾಂತರ ನೇಮಕ ಮಾಡಲು ತೀರ್ಮಾನಿಸಿತು.** |

| | |
|---|---|
| ಸಾಮಾನ್ಯ ಸಭೆ 2022/8.24 | ಕಾನೂನು ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಬೋಧನಾ ಕಾರ್ಯಭಾರದ ಬಗ್ಗೆ. |
| ತೀರ್ಮಾನ | ಕಾನೂನು ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಬೋಧನಾ ಕಾರ್ಯಭಾರಕ್ಕೆ "BAR Council of India" ನಿಯಮದ ಪ್ರಕಾರ ಅತಿಥಿ ಉಪನ್ಯಾಸಕರುಗಳನ್ನು ಆಹ್ವಾನಿಸಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/8.25 | ಚೈತ್ರ ಎಸ್., ಸಂಶೋಧನಾ ವಿದ್ಯಾರ್ಥಿ ಇವರಿಗೆ ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಚೈತ್ರ ಎಸ್., ಸಂಶೋಧನಾ ವಿದ್ಯಾರ್ಥಿ ಇವರಿಗೆ ಮಾನವೀಯತೆ ದೃಷ್ಟಿಯಿಂದ ರೂ.50,000/-ಗಳ ದಂಡ ಶುಲ್ಕದೊಂದಿಗೆ ದಿನಾಂಕ: 01-01-2023 ರಿಂದ 30-06-2023 (ಆರು ತಿಂಗಳು)ರವರೆಗೆ ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/8.26 | ವಿಶ್ವವಿದ್ಯಾನಿಲಯದಲ್ಲಿನ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿನ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಶಿಫಾರಸ್ಸು ಮಾಡಿತು. |

- **ಶ್ರೀ. ಪ್ರದೀಪ್ ಕುಮಾರ್ ದೀಕ್ಷಿತ್:** ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅತಿಥಿ ಉಪನ್ಯಾಸಕರಿಗೆ ವೇತನ ಹೆಚ್ಚಿಸುವ ಬಗ್ಗೆ ಚರ್ಚಿಸಲಾಯಿತು. ನ್ಯಾಯಾಲಯದ ಮೊರೆ ಹೋದವರ ಬಗ್ಗೆ ಚರ್ಚಿಸಲಾಯಿತು. ಈ ವಿಷಯವು ನಡವಳಿಯಲ್ಲಿ ದಾಖಲಾಗಿರುವುದಿಲ್ಲ. ಈ ವಿಷಯವನ್ನು ಉಲ್ಲೇಖಿಸಬೇಕೆಂದು ಖುದ್ದಾಗಿ ಕುಲಸಚಿವರಿಗೆ ಪತ್ರ ಕಳುಹಿಸಿದರೂ ಸಹ ತಿದ್ದುಪಡಿಯಾಗಿರುವುದಿಲ್ಲ ಹಾಗೂ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿನ ಉದ್ಯೋಗಿಗಳ ಹಾಜರಾತಿ ಸಂಬಂಧ ಹಾಜರಾತಿ ಪುಸ್ತಕದೊಂದಿಗೆ ಬಯೋಮೆಟ್ರಿಕ್ ಹಾಜರಾತಿಯನ್ನು ಸಹ ಅನುಷ್ಠಾನಗೊಳಿಸಲಾಗಿದೆ. ಆದರೆ, ತಾತ್ಕಾಲಿಕ ಉದ್ಯೋಗಿಗಳ ವೇತನ ಹುಂಡಿಯನ್ನು ಸಿದ್ಧಪಡಿಸುವಾಗ, ಬಯೋಮೆಟ್ರಿಕ್ ಹಾಜರಾತಿಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

- **ಪ್ರೊ. ಜಿ.ವೆಂಕಟೇಶ್‌ಕುಮಾರ್:** 7ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಘನ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ 80 ಮಂದಿ ಅತಿಥಿ ಉಪನ್ಯಾಸಕರಿಗೆ ವೇತನ ಹೆಚ್ಚಿಸುವ ಬಗ್ಗೆ ಚರ್ಚಿಸಿದಾಗ ವೇತನವನ್ನು ಹೆಚ್ಚಿಸಲು ಸಾಧ್ಯವಿಲ್ಲ ಎಂದು ಸಭೆಯಲ್ಲಿ ತಿಳಿಸಲಾಗಿತ್ತು. ಹೆಚ್ಚು ಮಾಡಲು ಸಾಧ್ಯವಾಗದೇ ಇರುವಾಗ ಕಡಿಮೆ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಹಾಗೆಯೇ, ವಿವಿ ಆದೇಶ ಸಂಖ್ಯೆ: ಇಟಿ11/28/2019-20, ದಿನಾಂಕ: 27-10-2022ರ ಟಿಪ್ಪಣಿಯಲ್ಲಿ ದಿನಾಂಕ: 08-09-2022 ರಿಂದ ಅನ್ವಯವಾಗುವಂತೆ, ಸ್ನಾತಕೋತ್ತರ ವಿಷಯದ ಎರಡನೇ ಚಾತುರ್ಮಾಸದ ಅವಧಿಯಲ್ಲಿ ದಿನಾಂಕ: 30-10-2022 ರವರೆಗೆ ಮುಂದುವರೆಸಲಾಗಿರುವುದರಿಂದ, ಈಗಾಗಲೇ ವಿವಿ ಆದೇಶ ಸಂಖ್ಯೆ: ಇಟಿ10/157/2022-23, ದಿನಾಂಕ: 20-09-2022ರ ಆದೇಶದಲ್ಲಿ ತಿಳಿಸಲಾಗಿರುವಂತೆ, ಘನ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಅತಿಥಿ ಉಪನ್ಯಾಸಕರುಗಳಿಗೂ ಅನ್ವಯಿಸಿ, ಪ್ರಸ್ತುತ ಅವರುಗಳು ಪಡೆಯುತ್ತಿರುವ ಸಂಭಾವನೆಯಲ್ಲಿ ಎರಡನೇ ಚಾತುರ್ಮಾಸದಲ್ಲಿ ಅವರುಗಳಿಗೆ ವಹಿಸಲಾಗಿರುವ ಕಾರ್ಯಭಾರಕ್ಕೆ ಈಗಾಗಲೇ ಅವರಿಗೆ ನೀಡಲಾಗುತ್ತಿರುವ ಸಂಭಾವನೆಯನ್ನು ಪ್ರತಿ ಗಂಟೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಿ ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರುಗಳು/ನಿರ್ದೇಶಕರುಗಳು/ಮುಖ್ಯಸ್ಥರು ಹಾಗೂ ಘಟಕ ಕಾಲೇಜಿನ ಪ್ರಾಂಶುಪಾಲರುಗಳು ದೃಢೀಕರಿಸಿದ ಹುಂಡಿಯನ್ನು ಪಾವತಿಗಾಗಿ ಅಂಗೀಕರಿಸಬೇಕೆಂದು ಹಣಕಾಸು ಅಧಿಕಾರಿಯವರಿಗೆ ತಿಳಿಸಿರುತ್ತಾರೆ. ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಗಂಟೆಯ ಆಧಾರದ ಮೇಲೆ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ನೀಡಿರುವ ಆದೇಶವನ್ನು

ಹಿಂಪಡೆದು, ಹಿಂದೆ ಹೊರಡಿಸಿರುವ ಆದೇಶವನ್ನೇ ಪಾಲಿಸಬೇಕೆಂದು ಪರಿಷ್ಕೃತ ಆದೇಶ ಹೊರಡಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

- **ಡಾ.ಈ.ಸಿ.ನಿಂಗರಾಜ್ ಗೌಡ:** ದಿನಾಂಕ: 22-08-2022ರಂದು ನಡೆದ 6ನೇ ಸಾಮಾನ್ಯ ಸಿಂಡಿಕೇಟ್‌ನ 6.27 ರ ವಿಷಯಸೂಚಿಯಲ್ಲಿ ಘನ ನ್ಯಾಯಾಲಯದಲ್ಲಿ ಮೊಖದ್ದಮೆ ಹೂಡಿರುವ ಅತಿಥಿ ಉಪನ್ಯಾಸಕರುಗಳಿಗೂ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಹಾಗೂ ಸರ್ಕಾರದ ನಿರ್ದೇಶನದನ್ವಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತೀರ್ಮಾನಿಸಿದ್ದು, ಎರಡು ತಿಂಗಳ ನಂತರ ಸರ್ಕಾರಕ್ಕೆ ಪತ್ರವನ್ನು ಬರೆಯಲಾಯಿತು. ಆದರೆ, ಸಿಂಡಿಕೇಟ್ ನಿರ್ಣಯದಂತೆ ಪತ್ರ ಬರೆಯದೆ, ಕುಲಸಚಿವರು ಬರೆದಂತೆ ಪತ್ರವನ್ನು ಬರೆದು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಅದರ ಬದಲು ಸಿಂಡಿಕೇಟ್‌ನಲ್ಲಿ ಆದ ನಿರ್ಣಯದ ಪ್ರತಿಯನ್ನೆ ಸರ್ಕಾರಕ್ಕೆ ಕಳುಹಿಸಬೇಕಾಗಿತ್ತೆಂದು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು.

  **ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್:** ಯಾವುದೇ ಪ್ರಸ್ತಾವನೆ ಅಥವಾ ನಡವಳಿಯಲ್ಲಿ ತಿದ್ದುಪಡಿಯೇನಾದರೂ ಇದ್ದಲ್ಲಿ, ಕುಲಸಚಿವರು ಲಿಖಿತ ರೂಪದಲ್ಲಿ ನೀಡಬೇಕೆಂದು ತಿಳಿಸಿರುವಂತೆ, ಲಿಖಿತ ರೂಪದಲ್ಲಿ ಪತ್ರವನ್ನು ಸಲ್ಲಿಸುವುದರೊಂದಿಗೆ whatsappನಲ್ಲಿಯೂ ಸಹ ಕಳುಹಿಸಿರುತ್ತೇನೆ. ಆದರೂ ಸಹ ಯಾವುದೇ ತಿದ್ದುಪಡಿಯು ಆಗಿರುವುದಿಲ್ಲ. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿದ ವಿಷಯಗಳ ನಡವಳಿಯನ್ನು ಮೊದಲು ತಿದ್ದುಪಡಿ ಮಾಡಿ, ನಂತರ ಅದನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು ಸೂಕ್ತವೆಂದು ತಿಳಿಸಿದರು.

- **ಪ್ರೊ.ಜಿ.ವೆಂಕಟೇಶ್‌ಕುಮಾರ್, ಡಾ.ಚೈತ್ರ ನಾರಾಯಣ ಮತ್ತು ಶ್ರೀ ಎಂ.ಬಿ.ಗಪ್ಪಣ್ಣ:** 7ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ವಿಷಯ ಕಾರ್ಯಸೂಚಿ 7.40ನಲ್ಲಿ ಕುಲಪತಿಗಳ ಆಯ್ಕೆಗೆ ಸಂಬಂಧಪಟ್ಟಂತೆ ಮಾನ್ಯ ಕುಲಪತಿಗಳು ಯಾರ ಹೆಸರನ್ನು ಶಿಫಾರಸು ಮಾಡಿರುತ್ತಾರೆಂದು ಸಭೆಗೆ ತಿಳಿಸಬೇಕೆಂದು ಕೋರಿದರು.

- **ಡಾ. ಎಂ.ಎಸ್.ದಾಮೋದರ:** ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದೇ ಹುದ್ದೆಗೆ ಎರಡು ರೀತಿಯಲ್ಲಿ ವೇತನ ಪಾವತಿಸುವುದು ಕಂಡು ಬಂದಿದ್ದು, ಇಂತಹ ವೇತನ ತಾರತಮ್ಯವನ್ನು ಸರಿಪಡಿಸಬೇಕೆಂದು ತಿಳಿಸಿದರು.

- **ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಡಾ. ಎಂ.ಎಸ್.ದಾಮೋದರ:** ಮೈಸೂರು ವಿಶ್ವವಿದ್ಯಾನಿಲಯದ ತಾತ್ಕಾಲಿಕ ತಾಂತ್ರಿಕ ಉದ್ಯೋಗಿಗಳಿಗೆ ವೇತನವನ್ನು ಹೆಚ್ಚಿಸುವ ಸಂಬಂಧ ಸಿಂಡಿಕೇಟ್ ಉಪ ಸಮಿತಿ ಸಭೆಯ ಶಿಫಾರಸ್ಸಿನಂತೆ ಕ್ರಮ ಕೈಗೊಂಡಿರುವುದಿಲ್ಲ ಹಾಗೂ ತಾತ್ಕಾಲಿಕ ತಾಂತ್ರಿಕ ಉದ್ಯೋಗಿಗಳ ಆದೇಶದ ಪ್ರತಿಗಳು, ವೇತನ, ಪದ ಬದಲಾವಣೆ ಮತ್ತು ಇತರೆ ಪೂರ್ಣ ಮಾಹಿತಿಗಳನ್ನು ಸಭೆಗೆ ಮಂಡಿಸಬೇಕೆಂದು ತಿಳಿಸಿದ್ದರೂ, ಇದುವರೆವಿಗೂ ಪೂರ್ಣ ಮಾಹಿತಿಯನ್ನು ಒದಗಿಸಿರುವುದಿಲ್ಲವೆಂದು ತಿಳಿಸಿದರು.

- **ಶ್ರೀ. ಎಸ್.ಡಿ.ದೊಡ್ಡಚಾರಿಯವರು:** 7ನೇ ಸಿಂಡಿಕೇಟ್ ಸಭೆಯ ಇತರ ವಿಷಯಗಳಲ್ಲಿ ಶಿಷ್ಯವೇತನದ ಬಗ್ಗೆ ಹಣಕಾಸು ಸಮಿತಿಯಲ್ಲಿ ಪ್ರಸ್ತಾಪಿಸಿದನ್ನು ಸಿಂಡಿಕೇಟ್ ಸಭೆಯಲ್ಲಿ ತಾವು ಪ್ರಸ್ತಾಸಿರುವುದಾಗಿ ತಿಳಿಸಿದರು. ಇತರೆ ಸಿಂಡಿಕೇಟ್ ಸದಸ್ಯರು ಶಿಷ್ಯವೇತನವನ್ನು ಹೆಚ್ಚಿಸಬೇಕೆಂದು ಹೇಳಿದರು. ಆದರೆ ತಾವು ಯಾವ ಆಧಾರದ ಮೇಲೆ ಶಿಷ್ಯವೇತನವನ್ನು ಜಾಸ್ತಿ ಮಾಡಬೇಕು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವುದಾದರೆ, ಎಲ್ಲರಿಗೂ ಸಮಾನವಾದ ಶಿಷ್ಯವೇತನವನ್ನು ನೀಡಬೇಕು. ಸರ್ಕಾರದಿಂದ ಶಿಷ್ಯವೇತನವನ್ನು ನೀಡುವುದಾದರೆ, ಮೀಸಲಾತಿಗೆ ಅನುಗುಣವಾಗಿ ನೀಡಬೇಕೆಂದು ತಾವು ಸಭೆಯಲ್ಲಿ ತಿಳಿಸಲಾಗಿತ್ತು. ಆದರೆ, ನಾನು ಪ್ರಸ್ತಾಪಿಸಿದ ಬೇರೆ ವಾಕ್ಯಯನ್ನು ನಡವಳಿಯಲ್ಲಿ ಸೇರ್ಪಡೆಗೊಳಿಸಿರುತ್ತಾರೆ ಎಂದು ಆಕ್ಷೇಪಿಸಿದರು. ಡಾ. ಚೈತ್ರ ನಾರಾಯಣರವರು ಮಾತನಾಡಿ, ಸದರಿ ವಿಷಯವನ್ನು ತಾವು ಸಹ ಪ್ರಸ್ತಾಪಿಸಿದೆ ಎಂದು ತಿಳಿಸಿದರು.

ಶ್ರೀ.ಆರ್.ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಶಿಷ್ಯವೇತನವನ್ನು ನ್ಯಾಯಯುತವಾಗಿ ಕೊಡಿ ಎಂದು ತಿಳಿಸಿದೆ ಎಂದು ಹೇಳಿದರು.

- **ಶ್ರೀ. ಎಸ್.ಡಿ.ದೊಡ್ಡಚಾರಿ:** ಕುಲಪತಿಯವರ ಸೇವಾವಧಿಯು ಪೂರ್ಣಗೊಳ್ಳುವ ಎರಡು ತಿಂಗಳುಗಳಲ್ಲಿ ಮಾನ್ಯ ಕುಲಪತಿಯವರು ಸಿಂಡಿಕೇಟ್ ಸಭೆಗೆ ಮಂಡಿಸಿರುವ ಹಾಗೂ ಮಂಡಿಸದೇ ಇರುವ ಕೆಲವು ಕಾರ್ಯಸೂಚಿಗಳ **ಪ್ರಮುಖ ನೀತಿ ನಿರ್ಧಾರಗಳನ್ನು** (major policy decisions) ತೆಗೆದುಕೊಂಡು ನೀಡಲಾಗಿರುವ ಆದೇಶಗಳನ್ನು ಹಿಂಪಡೆಯಲು ಹಣಕಾಸು ಸಮಿತಿಯಲ್ಲಿ ತೀರ್ಮಾನಿಸಲಾಗಿದೆ ಹಾಗೂ ಯಾವುದೇ ಆದೇಶವನ್ನು ಹೊರಡಿಸುವ ಮುನ್ನ ಪ್ರಾಧಿಕಾರದ ಅನುಮೋದನೆಯನ್ನು ಪಡೆದ ನಂತರ ಆದೇಶ ಹೊರಡಿಸುವುದು ನಿಯಮವಾಗಿರುತ್ತದೆಂದು ತಿಳಿಸಿದರು.

- **ಮಾನ್ಯ ಕುಲಪತಿ:** ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿದೇ ತಾಂತ್ರಿಕ/ತಾತ್ಕಾಲಿಕ ಉದ್ಯೋಗಿಗಳ ವೇತನವನ್ನು ಹೆಚ್ಚಿಸಿದಲ್ಲಿ, ಅದರ ಕಾರ್ಯಾದೇಶವನ್ನು ಹಿಂಪಡೆದು, ಮೊದಲು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದ ನಂತರ ಆದೇಶ ಹೊರಡಿಸಬೇಕೆಂದು ಸರ್ಕಾರ ತಿಳಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

- **ಶ್ರೀ.ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಂ.ಬಿ. ಗಪ್ಪಣ್ಣ, ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಡಾ.ಚೈತ್ರ ನಾರಾಯಣ್:** ಕುಲಪತಿಯವರ ಸೇವಾವಧಿಯ ಅಂತ್ಯದಲ್ಲಿ ತೆಗೆದುಕೊಂಡ ನಿರ್ಣಯ ಮತ್ತು ಆದೇಶಗಳನ್ನು ಅನುರ್ಜಿತಗೊಳಿಸಬೇಕೆಂದು ಸಭೆಗೆ ತಿಳಿಸಿದರು.

- **ಶ್ರೀಮತಿ ವೈ.ಕೆ. ಪವಿತ್ರ:** ಹಿಂದಿನ 7ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ Physical Education ಸಿಬ್ಬಂದಿಯವರಿಗೆ ವೇತನವನ್ನು ಹೆಚ್ಚಿಸಲು ತೀರ್ಮಾನ ಆಗಿದ್ದನ್ನು ಸಭೆಗೆ ತಿಳಿಸಿದರು. ಹಾಗೂ ಇವರುಗಳಿಗೆ ಇದುವರೆಗೂ ಯಾವ ರೀತಿಯಾದ ವೇತನವನ್ನು ಹೆಚ್ಚಿಸಿರುವುದಿಲ್ಲ ಎಂಬ ವಿಷಯವನ್ನು ಸಹ ಸಭೆಯ ಗಮನಕ್ಕೆ ತಂದರು. ಇತರೆ ಸಿಂಡಿಕೇಟ್ ಸದಸ್ಯರು ಮಾತನಾಡಿ ಸಂಬಳವನ್ನು ಹೆಚ್ಚಿಸುವ ಬಗ್ಗೆ ಅಲ್ಲ ಹುದ್ದೆ ಅವಶ್ಯಕತೆಯ ಬಗ್ಗೆ ಪ್ರಸ್ತಾಪಿಸಿದನ್ನು ತಿಳಿಸಿದರು.

- **ಡಾ.ಚೈತ್ರ ನಾರಾಯಣ:** ಕೆಲವು ತರಬೇತುದಾರರು ಮತ್ತು ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿದ್ದು ಹಲವಾರು ಚಿನ್ನದ ಪದಕವನ್ನು ವಿಶ್ವವಿದ್ಯಾನಿಲಯಕ್ಕೆ ತಂದಿರುವುದು ಹೆಮ್ಮೆಯ ವಿಷಯ ಇಂಥವರ ಬಗ್ಗೆ ಕಾಳಜಿ ಇರುವುದಾಗಿ ತಿಳಿಸಿದರು. ಈ ಸಂಬಂಧ ಸಮಿತಿಯನ್ನು ರಚಿಸಿ ವೇತನವನ್ನು ಹೆಚ್ಚಿಸಬೇಕಾಗಿ ಸಭೆಗೆ ಕೋರಿದರು.

- **ಡಾ. ಈ.ಸಿ. ನಿಂಗರಾಜ್ ಗೌಡ:** ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವು ಹಣಕಾಸು ಸಮಿತಿಯಲ್ಲಿ ಉರ್ಜಿತವಲ್ಲ ಎಂದರೆ ಹೇಗೆ? ಆಂತರಿಕ ಸಂಪನ್ಮೂಲದಿಂದ ಸರದೂಗಿಸಬೇಕು. ಸರ್ಕಾರ ವೇತನವನ್ನು ನೀಡಿದ್ದಲ್ಲಿ ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಎರಡು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಅನುರ್ಜಿತ ಎಂದು ಘೋಷಿಸಿದರೆ ಅದು ತಪ್ಪಾಗುತ್ತದೆ. ಕೆಲವು ತರಬೇತುದಾರರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇರುವುದು ನಮ್ಮ ಹೆಮ್ಮೆಯ ವಿಷಯ. ಅವರಿಗೆ ನೀಡುವ ಸಂಬಳ ಮುಖ್ಯವಲ್ಲ.

- **ಶ್ರೀ. ಎಸ್.ಡಿ.ದೊಡ್ಡಚಾರಿ:** ತಾಂತ್ರಿಕ ಸಿಬ್ಬಂದಿಯವರಿಗೆ ಸಮಿತಿಯನ್ನು ರಚಿಸಿ, ಸಮಿತಿಯು ನೀಡಿದ ವರದಿಯ ಮೇಲೆ ಅವರಿಗೆ ವೇತನವನ್ನು ಹೆಚ್ಚಿಸಿಲಾಗಿದೆ. ಎಲ್ಲರಿಗೂ ಸಮಾನವಾದ ವೇತನವನ್ನು ನೀಡುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

- **ಮಾನ್ಯ ಕುಲಪತಿ:** ಸಮಿತಿಯನ್ನು ರಚಿಸಿ ಮುಂದಿನ ಹಣಕಾಸು ಸಮಿತಿಯಲ್ಲಿ ಮಂಡಿಸಿ ಅಲ್ಲಿ ಅನುಮತಿ ಪಡೆದ ನಂತರ ಸಿಂಡಿಕೇಟ್ ಸಭೆಗೆ ತರುವುದಾಗಿ ತಿಳಿಸಿದರು.

- **ಶ್ರೀ.ಆರ್.ಪ್ರದೀಪ್ ಕುಮಾರ್ ದೀಕ್ಷಿತ್:** ಚಾಮರಾಜನಗರದಲ್ಲಿ ಸಿಬ್ಬಂದಿಯ ಪದನಾಮವನ್ನು ಬದಲಾವಣೆ ಮಾಡಲು ಹಿಂದಿನ ಕುಲಸಚಿವರನ್ನು ಕೋರಿದಾಗ ಪದನಾಮ ಬದಲಾವಣೆ ಮಾಡಲು ನಿಯಮವಿಲ್ಲವೆಂದು ತಿಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಆದರೆ ತಮ್ಮ ಸೇವಾಧಿಯ ಅಂತ್ಯದಲ್ಲಿ ಕೆಲವು ಉದ್ಯೋಗಿಗಳಿಗೆ ಪದನಾಮ ಬದಲಾವಣೆ ಮಾಡಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.
- **ಪ್ರೊ.ಜಿ.ವೆಂಕಟೇಶ್‌ಕುಮಾರ್:** ಈ ರೀತಿ ಪ್ರಕರಣಗಳು ಬಹಳಷ್ಟು ಇರುವುದರಿಂದ ಎಲ್ಲಾ ಆದೇಶಗಳನ್ನು ಹಿಂಪಡೆದು ಇದಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.
- **ಶ್ರೀ.ಎಸ್.ಡಿ.ದೊಡ್ಡಚಾರಿ:** ಸರ್ಕಾರದ ಆದೇಶವನ್ನು ಪಾಲನೆ ಮಾಡಲು ಸೂಕ್ತ ನಿರ್ದೇಶನ ನೀಡಬೇಕಾಗಿ ಕೋರಿದರು.

**<u>ಇತರೆ ವಿಷಯಗಳು:</u>**

1. ಪ್ರೊ.ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಪ್ರೊ. ನಾಗರಾಜ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಸರ್ಕಾರದ ಆದೇಶದ ಮೇರೆಗೆ ಕರ್ತವ್ಯದಿಂದ ಅಮಾನತುಗೊಳಿಸಲಾಯಿತು, ಕೆ.ಸಿ.ಎಸ್.ಆರ್ ನಿಯಮದ ಪ್ರಕಾರ 6 ತಿಂಗಳು ಅಮಾನತುಗೊಳಿಸಲು ಅವಕಾಶವಿದೆ, 6 ತಿಂಗಳ ನಂತರ ಅಥವಾ ಆರು ತಿಂಗಳೊಳಗೆ ಇಲಾಖಾ ವಿಚಾರಣೆ ನಡೆಸಿ, re-instate ಮಾಡಲು ಅವಕಾಶ ಇರುತ್ತದೆ. ಮೊದಲ 6 ತಿಂಗಳೊಳಗೆ 50% ವೇತನವನ್ನು, 6 ತಿಂಗಳ ನಂತರ 75%ರಷ್ಟು ವೇತನವನ್ನು, 8 ತಿಂಗಳು ಪೂರ್ಣಗೊಂಡ ನಂತರ 90% ರಷ್ಟು ವೇತನವನ್ನು ಪಾವತಿಸಲಾಗುತ್ತದೆ. ಇವರಿಗೆ 90%ರಷ್ಟು ವೇತನವನ್ನು ನೀಡುವುದರಿಂದ ಹಾಗೂ ಕೆ.ಸಿ.ಎಸ್.ಆರ್ ನಲ್ಲಿ ಇಲಾಖಾ ವಿಚಾರಣೆ ನಡೆಸಿ, re-instate ಮಾಡಲು ಅವಕಾಶ ಇರುವುದರಿಂದ, ಇವರಿಗೆ ಕಾರ್ಯ ನಿರ್ವಹಿಸಲು ಸೂಚಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಸರ್ಕಾರದ ಪತ್ರದಂತೆ ಇಲಾಖಾ ವಿಚಾರಣೆಗೆ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಸೂಚಿಸಿದರು ಹಾಗೂ pending approval of the decision of the court ಎಂದು ಆದೇಶ ಹೊರಡಿಸಿ, ಪ್ರೊ. ನಾಗರಾಜ್ ಇವರಿಗೆ ಮೂಲ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ಅಭಿಪ್ರಾಯಿಸಿದರು.
2. ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ನೌಕರರು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದ ಖಾಯಂ ನೌಕರರಿಗೆ ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ಮಾಡಿರುವುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. 1998ರ ಸರ್ಕಾರದಿಂದ ಆದೇಶನ್ವಯ, ಒಂದೇ ಜೇಷ್ಠತಾ ಪಟ್ಟಿಯನ್ನು ನಿರ್ವಹಿಸಬೇಕು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದ ಖಾಯಂ ನೌಕರರಿಗೆ ಈಗಾಗಲೇ ದೊರಕಬೇಕಾದ ಸವಲತ್ತುಗಳನ್ನು ಹೊರತುಪಡಿಸಿ, ಇನ್ನು ಮುಂದೆ ಅವರಿಗೂ ಸಿಗಬೇಕಾದ ಸವಲತ್ತುಗಳು ಸಿಗುವಂತೆ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಬೇಕೆಂದು ವರದಿಯನ್ನು ಸಲ್ಲಿಸಿರುವುದಾಗಿ ತಿಳಿಸಿದರು. ಹಲವು ವರ್ಷಗಳಿಂದ ವಿದ್ಯಾರ್ಥಿ ನಿಲಯದ ಖಾಯಂ ನೌಕರರಿಗೆ ಅನ್ಯಾಯವಾಗಿರುವುದರಿಂದ ಶೀಘ್ರದಲ್ಲೇ ಜೇಷ್ಠತಾ ಪಟ್ಟಿಯನ್ನು ಸಿದ್ಧಗೊಳಿಸಬೇಕೆಂದು ಕೋರಿದರು.
3. ಡಾ. ಈ.ಸಿ.ನಿಂಗರಾಜ್ ಗೌಡರವರು ಮಾತನಾಡಿ, ವಿಶ್ವವಿದ್ಯಾನಿಲಯದ ನೌಕರರಾದ ಶ್ರೀ ಟಿ.ಸಿ.ನಾರಾಯಣ ಅವರ ಪೋಷಕರು ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ, ಮಂಡ್ಯಕ್ಕೆ ಜಮೀನು ನೀಡಿರುವ ಪ್ರಯುಕ್ತ, ಹಿಂದಿನ ಸಭೆಯಲ್ಲಿ ಸಂಖ್ಯಾತಿರಿಕ್ತ ಹುದ್ದೆಯನ್ನು ಸೃಜಿಸಿ ಪದೋನ್ನತಿ ನೀಡಲಾಯಿತು. ಇವರು ಪದೋನ್ನತಿ ಪಡೆದ ನಂತರ ಇನ್ನು 04 ಉದ್ಯೋಗಿಗಳಿಗೆ ಪದೋನ್ನತಿ ನೀಡಿ, ವೇತನ ಹಾಗೂ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದೆ. ಆದರೆ, ಇದುವರೆವಿಗೂ ಶ್ರೀ ಟಿ.ಸಿ.ನಾರಾಯಣ ಅವರಿಗೆ ವೇತನ ಹಾಗೂ ವೇತನ ಶ್ರೇಣಿಯನ್ನು ನಿಗದಿಪಡಿಸಿರುವುದಿಲ್ಲ.

ಆದ್ದರಿಂದ ಕೂಡಲೇ ಶ್ರೀ ಟಿ.ಸಿ.ನಾರಾಯಣ ಅವರಿಗೆ ವೇತನ ಹಾಗೂ ವೇತನ ಶ್ರೇಣಿಯನ್ನು ನಿಗದಿಪಡಿಸಬೇಕೆಂದು ಆಗ್ರಹಿಸಿದರು.

4. ಶ್ರೀಮತಿ ವೈ.ಕೆ.ಪವಿತ್ರ ಇವರು ಮಾತನಾಡಿ, ಡಾ.ಬಸವರಾಜ್ ಬಾರ್ಕೇರ್ ಅವರಿಗೆ ಸಿ.ಎ.ಎಸ್ ಪದೋನ್ನತಿಯನ್ನು ತಡೆಹಿಡಿದಿರುವ ಬಗ್ಗೆ ಪ್ರಸ್ತಾಪಿಸಿದರು.
5. ಶ್ರೀ ಎಂ.ಬಿ.ಗಪ್ಪಣ್ಣ ಅವರು ಡಾ.ಸುರೇಶ್ ಅವರಿಗೆ ಹೊರಡಿಸಬೇಕಾಗಿರುವ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ಆದೇಶಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ್ದು, ಈ ಸಂಬಂಧ ಕುಲಪತಿಯವರು ಮಾತನಾಡಿ, ಡಾ.ಸುರೇಶ್ ಅವರು ಪ್ರಕಟಿಸಿರುವ Article Standard ಆಗಿಲ್ಲವೆಂದು ಆಕ್ಷೇಪಣೆ ಮಾಡಿರುವುದನ್ನು ಸಭೆಯ ಗಮನಕ್ಕೆ ತಂದರು. ಆಗ ಅವರು ತಕ್ಷಣ ಬೇರೆ Article ಕೊಟ್ಟಿರುವುದಾಗಿ ತಿಳಿಸಿ, ಅದನ್ನು ಪ್ರೊ. ಮುಜಾಫರ್ ಎಚ್ ಅಸ್ಸಾದಿ ಮತ್ತು ಪ್ರೊ.ಕೇಶವ್ ಅವರಿಗೆ ಮೌಲ್ಯಮಾಪನಕ್ಕಾಗಿ ಕಳುಹಿಸಿ ಅವರು ವರದಿ ನೀಡಿದ ನಂತರ ನಿರ್ಧಾರ ತೆಗೆದುಕೊಳ್ಳುವುದಾಗಿ ಸಭೆಗೆ ತಿಳಿಸಿದರು.
6. ಶ್ರೀಮತಿ ವೈ.ಕೆ. ಪವಿತ್ರ ಅವರು ಮಾತನಾಡಿ ಶ್ರೀಮತಿ ಮಂಗಳ ಅವರು ಜನವರಿಯಲ್ಲಿ ನಿವೃತ್ತಿ ಹೊಂದುವುದರಿಂದ ಅವರಿಗೆ ಸಿ.ಎ.ಎಸ್ ಅಡ್ಡಿಯಲ್ಲಿ ಪದೋನ್ನತಿ ನೀಡಬೇಕೆಂದು ತಿಳಿಸಿದರು.
7. CISTನಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಕಛೇರಿ ಕೆಲಸದಿಂದ ಬಿಡುಗಡೆಗೊಳಿಸಿದ ಎರಡು ದಿನಗಳ ನಂತರ ಆದೇಶ ನೀಡುವ ಬದಲು ಎರಡು ತಿಂಗಳಾದ ಮೇಲೆ ಇವರಿಗೆ ಆದೇಶವನ್ನು ನೀಡುವುದರಿಂದ, ಸದರಿ ಉದ್ಯೋಗಿಗಳಿಗೆ ಎರಡು ತಿಂಗಳ ವೇತನವನ್ನು ದೊರಕದೆ ಇರುವ ಬಗ್ಗೆ ಸಭೆಗೆ ತಿಳಿಸಿದರು.
8. ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ವಿದ್ಯಾರ್ಥಿನಿಲಯಗಳನ್ನು ಸ್ವಚ್ಛಗೊಳಿಸಬೇಕಾಗಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರವನ್ನು ಸಿಂಡಿಕೇಟ್ ಸಭಾಂಗಣದಲ್ಲಿ ಅಳವಡಿಸಲು ಸಲಹೆ ನೀಡಿದರು.
9. ಪ್ರೊ.ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಈಜುಕೊಳದ ಜೀವರಕ್ಷಕ ಇವರನ್ನು ವರ್ಗಾವಣೆ ಮಾಡಿರುವುದರ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ, ಈ ಕೂಡಲೇ ಅವರಿಗೆ ನೀಡಿರುವ ವರ್ಗಾವಣೆ ಆದೇಶವನ್ನು ರದ್ದುಪಡಿಸಬೇಕೆಂದು ಸೂಚಿಸಿದರು.

ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಕುಲಪತಿಗಳು (ಪ್ರಭಾರ) ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವೆ ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿ (ಪ್ರಭಾರ) ಹಾಗೂ ಅಧ್ಯಕ್ಷರು